ಅಡಿ, ಅಗಲವು 2–3 ಅಡಿ ಹಾಗೂ ಎತ್ತರವೂ 2 – 3 ಅಡಿ ಇದ್ದರೆ ಸೂಕ್ತ. ಬೇರೆ ಪದ್ಧತಿಗಳಿಗೆ ಹೋಲಿಸಿದರೆ ಈ ರಾಶಿ ಪದ್ಧತಿಯಲ್ಲಿ ತೇವಾಂಶವು ಬೇಗನೇ ಆವಿಯಾಗುವುದರಿಂದ, ಘಟಕದಲ್ಲಿನ ತೇವಾಂಶ ನಿರ್ವಹಣೆಯ ಬಗ್ಗೆ ಹೆಚ್ಚು ಗಮನ ಹರಿಸಬೇಕಾಗುತ್ತದೆ. ಈ ಪದ್ಧತಿಯಲ್ಲಿ ಘಟಕಗಳಿಗೆ ಯಾವುದೇ ಹೊದಿಕೆ / ಕವಚಗಳು ಇಲ್ಲದ ಕಾರಣ ಹುಳುಗಳನ್ನು ತಿನ್ನಲು ಪಕ್ಷಿಗಳು, ಕಪ್ಪೆ ಮುಂತಾದವುಗಳನ್ನು ಬರುವ ಸಾಧ್ಯತೆ ಇರುವುದರಿಂದ ನಿರ್ವಹಣೆ ಮಾಡುವುದು ಅಲ್ಪ ಮಟ್ಟಿಗೆ ಕಷ್ಟಕರವಾಗಿರುತ್ತದೆ.

**ಎರೆಹುಳು ಗೊಬ್ಬರ ತಯಾರಿಸುವ ವಿಧಾನ :**

1. ಸಾವಯವ ತ್ಯಾಜ್ಯ ವಸ್ತುಗಳನ್ನು ಎರೆಹುಳು ಗೊಬ್ಬರ ಉತ್ಪಾದನಾ ಘಟಕದ ಹತ್ತಿರ ಸಂಗ್ರಹಿಸುವುದು ಮತ್ತು ಅವಶ್ಯಕತೆಗೆ ಅನುಗುಣವಾಗಿ ಉಪಚರಿಸಿ ಉಪಯೋಗಿಸುವುದು.
2. ಎರೆಹುಳು ಗೊಬ್ಬರದ ತೊಟ್ಟಿಗಳನ್ನು ತ್ಯಾಜ್ಯ ವಸ್ತುಗಳಿಂದ ತಂಬುವುದು: ತ್ಯಾಜ್ಯ ವಸ್ತುಗಳ ಲಭ್ಯತೆಗೆ ಅನುಗುಣವಾಗಿ ಶೇ. 50 – 60 ರಷ್ಟು ಒಣ ತ್ಯಾಜ್ಯ, ಶೇ. 20 – 25 ರಷ್ಟು ಹಸಿರು ಎಲೆ ತ್ಯಾಜ್ಯ, ಶೇ. 15 – 20 ರಷ್ಟು ಪ್ರಾಣಿಗಳ ಸಗಣಿ, ಹಿಕ್ಕೆ ಅಥವಾ ಸಗಣಿ ಗಂಜಲ ಸೂಕ್ತವಾದ ಪ್ರಮಾಣವಾಗಿರುತ್ತದೆ.
3. ತ್ಯಾಜ್ಯ ವಸ್ತುಗಳನ್ನು ಈ ಕೆಳಗೆ ಚಿತ್ರದಲ್ಲಿ ತೋರಿಸಿದಂತೆ ತುಂಬುವುದು ಸೂಕ್ತವಾಗಿರುತ್ತದೆ.






4. ತ್ಯಾಜ್ಯ ವಸ್ತುಗಳನ್ನು ಮಡಿಗಳಲ್ಲಿ ತುಂಬಿದ ನಂತರ 15–20 ದಿವಸಗಳವರೆಗೆ ನೀರನ್ನು ಸಿಂಪರಣೆ ಮಾಡಿ ತ್ಯಾಜ್ಯವನ್ನು ಕೊಳೆಸಬೇಕು.
5. ನಂತರ ಪ್ರತಿ ಮೀಟರ್ ಅಳತೆಯಂತೆ ಕನಿಷ್ಠ 100 –150 ಎರೆ ಹುಳುಗಳನ್ನು ಬಿಟ್ಟ ನಂತರ ಮಡಿಗಳನ್ನು ತೆಂಗಿನ ಗರಿ, ಗೋಣಿ ಚೀಲದಿಂದ ಮುಚ್ಚಬೇಕಾಗುತ್ತದೆ.
6. ತೊಟ್ಟಿಗಳನ್ನು ಮಳೆ ಮತ್ತು ಬಿಸಿಲಿನಿಂದ ಕಾಪಾಡಲು ಶೆಡ್, ಚಪ್ಪರ ಅಥವಾ ನೆರಳು ಕೊಡುವ ದೊಡ್ಡ ಗಿಡ ಮರಗಳಿಂದ ಸಂರಕ್ಷಿಸಬೇಕಾಗುತ್ತದೆ.
7. .ಮಡಿಗಳಲ್ಲಿ ತೇವಾಂಶ (50–60%) ಕಾಪಾಡಲು ನಿಗದಿತ ಸಮಯದಲ್ಲಿ ನೀರನ್ನು ಮೇಲ್ಭಾಗದಲ್ಲಿ ಸಿಂಪರಣೆ ಮಾಡಬೇಕು. ಈ ರೀತಿ ತೇವಾಂಶವನ್ನು ಕಾಯ್ದುಕೊಳ್ಳುವುದರಿಂದ ಎರೆಹುಳುಗಳು ಬೇಗನೆ ವೃದ್ಧಿ ಹೊಂದುತ್ತವೆ.
8. ಸುಮಾರು 60–90 ದಿನಗಳಲ್ಲಿ ಉಪಯೋಗಿಸಿದ ತ್ಯಾಜ್ಯ ಪದಾರ್ಥಗಳ ಉಪಚಾರಕ್ಕೆ ಅನುಗುಣವಾಗಿ, ಎರೆಹುಳು ಗೊಬ್ಬರವು ಸಂಗ್ರಹವಾಗುತ್ತದೆ. ಆಗ ಒಂದು ವಾರದ ಕಾಲ ತೊಟ್ಟಿಗೆ ನೀರನ್ನು ಹಾಕುವುದನ್ನು ನಿಲ್ಲಿಸಬೇಕು.
9. ತೊಟ್ಟಿಯಲ್ಲಿ ಸಂಗ್ರಹವಾಗಿರುವ ಗೊಬ್ಬರವನ್ನು ಮಡಿಯಿಂದ ತೆಗೆದು 4–5 ಮಿ. ಮೀ. ಇರುವ ಜರಡಿಯಿಂದ ಜರಡಿ ಮಾಡಿ ಹುಳುಗಳು ತಿನ್ನದೆ ಉಳಿದಿರುವ ಕಸಕಡ್ಡಿ, ಸಣ್ಣ ಎರೆಹುಳು ಮರಿಗಳು ಮತ್ತು ಮೊಟ್ಟೆಯ ಕೋಶಗಳಿಂದ ಬೇರ್ಪಡಿಸಿದ ನಂತರ ಎರೆಗೊಬ್ಬರವನ್ನು ನೆರಳಲ್ಲಿ ಒಣಗಿಸಿ (ಶೇ 25 ರಿಂದ 30 ರಷ್ಟು ತೇವಾಂಶವಿರುವಂತೆ) ಪಾಲಿಥೀನ್ ಚೀಲಗಳಲ್ಲಿ ತುಂಬಿಡಬೇಕು ಇಲ್ಲವೇ ಸಿಮೆಂಟ್ ತೊಟ್ಟಿಗಳಲ್ಲಿ, ಅಂಕಣದಲ್ಲಿ ಶೇಖರಿಸಬಹುದು.

ಉತ್ಪಾದನೆಯಾದ ಎರೆಹುಳು ಗೊಬ್ಬರವನ್ನು 6–8 ತಿಂಗಳೊಳಗಾಗಿ ಗೊಬ್ಬರವನ್ನು ಉಪಯೋಗಿಸುವುದು ಸೂಕ್ತ.

**ಗಮನಿಸಬೇಕಾದ ಮುಂಜಾಗ್ರತಾ ಕ್ರಮಗಳು**

- **ಎರೆಹುಳುಗಳನ್ನು ಗೊಬ್ಬರದಿಂದ ಬೇರ್ಪಡಿಸುವುದು:** ಒಮ್ಮೆ ಎರೆಗೊಬ್ಬರ ತಯಾರಾದ ನಂತರ ಹುಳುಗಳನ್ನು ಬೇರ್ಪಡಿಸಿ ಎರೆಗೊಬ್ಬರವನ್ನು ಶೇಖರಣೆ ಮಾಡಬೇಕಾಗುತ್ತದೆ. ಎರೆಹುಳುಗಳನ್ನು ಬೇರ್ಪಡಿಸಲು ನೆಲದ ಮೇಲೆ ಸಗಣಿಗಳ ಉಂಡೆಗಳನ್ನು ಮಾಡಿ 3–4 ಜಾಗಗಳಲ್ಲಿ ಇಟ್ಟು, ಸಗಣಿ ಉಂಡೆಯ ಮೇಲೆ ತೆಳ ಭಾಗದಿಂದ ತೆಗೆದ ಎರೆಗೊಬ್ಬರವನ್ನು ಸುರಿದು ಒಂದು ದಿನ ಬಿಡುವುದರಿಂದ ಎಲ್ಲಾ ಎರೆಹುಳುಗಳು ಸಗಣಿಯಲ್ಲಿ ಅಂಟಿಕೊಳ್ಳುತ್ತವೆ ತದನಂತರ ಎರೆಹುಳುಗಳು ಅಂಟಿಕೊಂಡ ಸಗಣಿ ಉಂಡೆಗಳನ್ನು ಪಕ್ಕದಲ್ಲಿ ಸಿದ್ಧಪಡಿಸಿದ ತೊಟ್ಟಿಗೆ ಹಾಕಬೇಕು.
- ಎರೆಹುಳುಗಳನ್ನು ಸಾಕುವ ತೊಟ್ಟಿಯಲ್ಲಿ ಉಷ್ಣಾಂಶವು 20–30°ಸೆ. ಮತ್ತು ತೇವಾಂಶ ಶೇ. 50–60 ವರೆಗೆ ಕಾಪಾಡಬೇಕು.
- ನೀಲಗಿರಿ ಎಲೆ, ಕಳ್ಳಿ, ಎಕ್ಕ, ಬೂದಿ, ಕೂದಲು, ಪ್ಲಾಸ್ಟಿಕ್, ಗಾಜಿನಂತ ವಸ್ತುಗಳನ್ನು ಉಪಯೋಗಿಸುವುದರಿಂದ ಎರೆ ಹುಳಗಳ ಮೇಲೆ ನೇರ ಪರಿಣಾಮ ಹಾಗೂ ಹಾನಿ ಮಾಡುವುದರಿಂದ ಅವುಗಳನ್ನು ಎರೆ ಘಟಕಕ್ಕೆ ಬಳಸಬಾರದು.
- ಸಾಮಾನ್ಯವಾಗಿ ಎರೆಗೊಬ್ಬರ ಘಟಕಕ್ಕೆ ಮಣ್ಣಿನಲ್ಲಿ ವಾಸಿಸುವ ಇರುವೆ / ಗೆದ್ದಲುಗಳು ಮುಖ್ಯ ಪೀಡೆಯಾಗಿರುತ್ತದೆ. ಇದಕ್ಕಾಗಿ ನೆಲದಲ್ಲಿನ ಇರುವೆ, ಗೆದ್ದಲುಗಳನ್ನು ದೂರಗೊಳಿಸಲು ಎರೆಘಟಕ ಹಾಗೂ ಸುತ್ತಲಿನ 2 ಮೀ ದೂರದವರೆಗಿನ ಜಾಗವನ್ನು ಪ್ರತಿ ನಿತ್ಯ ಹೆಚ್ಚು ನೀರನ್ನು ಹಾಕುವುದರಿಂದ ಬೇರೆ ಜಾಗಕ್ಕೆ ವಲಸೆಯಾಗುವಂತೆ ಮಾಡಬಹುದು.

**ಎರೆಜಲ (ವರ್ಮಿ ವಾಷ್) ಉತ್ಪಾದನೆ:**

ಎರೆಹುಳುಗಳನ್ನು ಸಾಕಣೆ ಮಾಡುವಾಗ ತೊಟ್ಟಿಗಳನ್ನು ಸ್ವಲ್ಪ ಇಳಿಜಾರಾಗಿ ಕಟ್ಟಿ ಹುಳುವಿನ ಹಿಕ್ಕೆಗಳು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾದ ಸಮಯದಲ್ಲಿ ನೀರನ್ನು ಸಿಂಪರಣೆ ಮಾಡಿ ಸಾಕಣೆ ಘಟಕದಲ್ಲಿ ನೀರು ಹಾಯ್ದು ಹೊರ ಬರುವಂತೆ ಮಾಡಿಕೊಳ್ಳಬೇಕು. ಈ ರೀತಿಯಾಗಿ ಸಂಗ್ರಹಿಸುವ ಪದಾರ್ಥಕ್ಕೆ ಎರೆಜಲ ಅಥವಾ ವರ್ಮಿ ವಾಷ್ ಎಂದು ಕರೆಯಲಾಗುವುದು. ಎರೆಜಲವು ಬೆಳೆಗೆ ಬೇಕಾಗುವ ಹಲವಾರು ಪೋಷಕಾಂಶಗಳು, ಜೀವನಿರೋಧಕ ಮತ್ತು ಬೆಳೆ ಪ್ರಚೋದಕ ವಸ್ತುಗಳನ್ನು ಹೊಂದಿರುತ್ತದೆ. ಇದನ್ನು ತರಕಾರಿ, ಹಣ್ಣಿನ ಬೆಳೆಗಳು ಹಾಗೂ ಎಲ್ಲಾ ಬಗೆಯ ಬೆಳೆಗಳಿಗೆ ಸಿಂಪರಣೆ ಮುಖಾಂತರ ಉಪಯೋಗಿಸಬಹುದರಿಂದ ಬೆಳೆಗಳ ಉತ್ಪಾದನೆ, ಗುಣಮಟ್ಟ, ಕೀಟನಿರೋಧಕ ಶಕ್ತಿ ವೃದ್ಧಿಸುತ್ತದೆ.

**ಎರೆಹುಳು ಗೊಬ್ಬರದಿಂದ ಆಗುವ ಉಪಯೋಗಗಳು:**

1. ಮಣ್ಣಿನ ನೀರು ಹೀರುವ ಮತ್ತು ಗಾಳಿಯಾಡುವಿಕೆ ಗುಣ ಸುಧಾರಿಸುತ್ತದೆ.
2. ಹೆಚ್ಚಿನ ಪ್ರಮಾಣದಲ್ಲಿ ಮುಖ್ಯ ಹಾಗೂ ಲಘು ಪೋಷಕಾಂಶಗಳು ಬೆಳೆಗಳಿಗೆ ಲಭ್ಯವಾಗುತ್ತವೆ.
3. ಮಣ್ಣಿನ ರಸಸಾರ ಮತ್ತು ಹಾನಿಕಾರಕ ಲವಣಗಳ ಪ್ರಮಾಣ ಕಡಿಮೆಯಾಗುವುದು.
4. ಮಣ್ಣಿನಲ್ಲಿ ಸಹಾಯಕಾರಿ ಸೂಕ್ಷ್ಮಾಣು ಜೀವಿಗಳ ಸಂಖ್ಯೆ ಹೆಚ್ಚುವುದು.
5. ಎರೆಗೊಬ್ಬರದ ಸತತ ಬಳಕೆಯಿಂದ ಮಣ್ಣಿನ ಭೌತಿಕ ಗುಣಗಳ ಸವೆತ ಸುಧಾರಿಸಿ ಮಣ್ಣಿನ ಸವೆತ ಕಡಿಮೆಯಾಗುವುದು.
6. ಕರಾವಳಿ, ಮಲೆನಾಡಿನ ಭಾಗಗಳಲ್ಲಿ ತೋಟಗಾರಿಕೆ ಬೆಳೆಗಳಿಗೆ ಕೊಳೆ ರೋಗ ಹೆಚ್ಚಾಗಿರುವುದರಿಂದ ಜೈವಿಕ ಶಿಲೀಂಧ್ರನಾಶಕವಾದ ಟ್ರೈಕೋಡರ್ಮವನ್ನು ಮಿಶ್ರ ಮಾಡಿ ಉಪಯೋಗಿಸುವುದರಿಂದ ಕೊಳೆರೋಗವನ್ನು ನಿಯಂತ್ರಿಸಬಹುದು.

Technical Folder Series No. 18/2020

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು

# ಎರೆಹುಳು ಗೊಬ್ಬರ ಉತ್ಪಾದನಾ ತಾಂತ್ರಿಕತೆ

## ಕೃಷಿ ಕಸದಿಂದ ರಸವೆಂಬ ಸಂಪತ್ತು



ತಾಂತ್ರಿಕ ಮಾಹಿತಿ
ಡಾ. ನವೀನ್ ಕುಮಾರ್ ಬಿ. ಟಿ.
ಡಾ. ಮಲ್ಲಿಕಾರ್ಜುನ ಎಲ್.
ಡಾ. ಟಿ. ಜೆ. ರಮೇಶ
ಡಾ. ಚೇತನ್ ಎನ್
ಡಾ. ಕೇದಾರನಾಥ್
ಡಾ. ರಶ್ಮಿ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,
ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು, ಕಂಕನಾಡಿ ಅಂಚೆ,
ಮಂಗಳೂರು, ದಕ್ಷಿಣ ಕನ್ನಡ – 575002
www.kvkdk.org, kvkdk@rediffmail.com, 0824–2431872

ಮಾರ್ಚ್, 2020

ಭೂಮಿತಾಯಿಯ ಕರಳು, ರೈತನ ಮಿತ್ರ, ಪ್ರಕೃತಿಯ ನೇಗಿಲು ಹೀಗೆ ಹಲವಾರು ಹೆಸರುಗಳಿಂದ ಕರೆಯಲ್ಪಡುವ ಎರೆಹುಳು ಮಣ್ಣಿನ ಆರೋಗ್ಯ ಮತ್ತು ಫಲವತ್ತತೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಎರೆಹುಳು ತಳದ ಮಣ್ಣನ್ನು ಮೇಲೆ ತಂದು, ಸಾವಯವ ವಸ್ತುಗಳನ್ನು ತನ್ನ ಜಠರದಲ್ಲಿ ವಿಭಜಿಸಿ, ವಿವಿಧ ಪೋಷಕಾಂಶಗಳನ್ನು ಒಳಗೊಂಡ ಹಿಕ್ಕೆಗಳನ್ನು ಹಾಕುತ್ತದೆ, ಈ ಹಿಕ್ಕೆಗೆ ಎರೆಹುಳು ಗೊಬ್ಬರ ಎಂದು ಕರೆಯಲಾಗುವುದು. ಎರೆಹುಳುಗಳು ಭೂಮಿಯ ಮೇಲ್ಪದರದಲ್ಲಿ ಸಿಗುವ ಸಾವಯವ ತ್ಯಾಜ್ಯ ಪದಾರ್ಥಗಳನ್ನು ಮಣ್ಣಿನಲ್ಲಿ ಸೇರಿಸಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವದಲ್ಲದೆ. ಮಣ್ಣನ್ನು ಕೊರೆದು ನಿರಂತರವಾಗಿ ಪದರಗಳ ಮಿಶ್ರ ಮಾಡುವಿಕೆಯಿಂದ ಮಣ್ಣಿನಲ್ಲಿನ ಗಾಳಿಯಾಡುವಿಕೆ ಮತ್ತು ನೀರು ಬಸಿಯುವಿಕೆ ವೃದ್ಧಿಗೊಂಡು ಬೆಳೆಗಳ ಬೇರುಗಳು ಸಮೃದ್ಧಿಯಾಗಿ ಬೆಳೆಯಲು ಸಹಕಾರಿಯಾಗುತ್ತದೆ.

**ಎರೆಹುಳು ಗೊಬ್ಬರದಲ್ಲಿರುವ ಪೋಷಕಾಂಶಗಳು:**

ಎರೆಹುಳು ಗೊಬ್ಬರದಲ್ಲಿ ಅಡಕವಾಗಿರುವ ಪೋಷಕಾಂಶಗಳು ಮತ್ತು ಸೂಕ್ಷ್ಮಾಣು ಜೀವಿಗಳ ವಿವರ

| ಮುಖ್ಯ ಪೋಷಕಾಂಶಗಳು (%) | | | ಲಘು ಪೋಷಕಾಂಶಗಳು (ಪಿ.ಪಿ.ಎಂ) | | | | ಸೂಕ್ಷ್ಮಾಣು ಜೀವಿಗಳ (ಪ್ರತಿ ಗ್ರಾಂ.ಗೆ) | | |
|---|---|---|---|---|---|---|---|---|---|
| ಸಾರಜನಕ | ರಂಜಕ | ಪೊಟ್ಯಾಷ್ | ತಾಮ್ರ | ಕಬ್ಬಿಣ | ಸತು | ಮ್ಯಾಂಗನೀಸ್ | ಶಿಲೀಂಧ್ರ | ಬ್ಯಾಕ್ಟೀರಿಯಾ | ಆಕ್ಟಿನೊ ಮೈಸೀಟ್ಸ್ |
| 1.10 – 2.00 | 0.80 – 0.90 | 0.98 – 1.50 | 52 – 61.50 | 930 – 1247 | 84 – 186 | 480–510 | $2.65 \times 10^4$ | $11.37 \times 10^7$ | $10.43 \times 10^4$ |

ಇದಲ್ಲದೆ, ಇದು ಬೆಳೆ ಪ್ರಚೋದಕ ಪದಾರ್ಥಗಳಾದ ಜಿಬ್ಬರಲಿನ್, ಸೈಟೋಕೈನಿನ್, ಎನ್.ಎ.ಎ ಹಾಗೂ ಅಂಟಿಬಯೊಟಿಕ್ಸ್ ವಸ್ತುಗಳನ್ನು ಹೊಂದಿರುವುದರಿಂದ ಎರೆಹುಳು ಗೊಬ್ಬರ ಬೆಳೆಗಳಿಗೆ ಸತ್ವಭರಿತ ಸಂಪೂರ್ಣ ಸಾವಯವ ಗೊಬ್ಬರವಾಗಿರುವುದು.

**ಎರೆಹುಳುಗಳ ಆಯ್ಕೆ**

ನಮ್ಮ ಭಾರತ ದೇಶದಲ್ಲಿ ಸುಮಾರು 350 ಗುಂಪಿಗೆ ಸೇರಿರುವ ಎರೆಹುಳುಗಳು ಕಾಣಲು ಸಿಗುತ್ತವೆ. ಆದರೆ, ಎರೆಹುಳು ಸಾಕಣೆ ಮತ್ತು ಎರೆಗೊಬ್ಬರ ತಯಾರಿಕೆಯ ದೃಷ್ಟಿಯಿಂದ ಮೂರು ಜಾತಿಯ ಹುಳುಗಳು ಬಹಳ ಪ್ರಮುಖವಾದುದು.

**1. ಯುಡ್ರಿಲಸ್ ಯುಜೆನೀಯಾ:**

➤ಈ ಜಾತಿಯ ಎರೆಹುಳುಗಳು ಕಂದು ಬಣ್ಣವನ್ನು ಹೊಂದಿದ್ದು ಇವುಗಳನ್ನು ಆಫ್ರಿಕದ ನಿಶಾಚರಿ ಎಂದು ಕರೆಯುತ್ತಾರೆ.



**2. ಐಸಿನೀಯಾ ಫೆಕ್ಟಿಡಾ:**



➤ಈ ಜಾತಿಯ ಎರೆಹುಳುಗಳು ಕೆಂಪು / ನೇರಳೆ ಬಣ್ಣದಿಂದ ಕೂಡಿದ್ದು ಇವುಗಳನ್ನು ಟೈಗರ್ ಹುಳು/ ಯುರೋಪಿಯನ್ ಹುಳು ಎಂದು ಕರೆಯುತ್ತಾರೆ.

**3. ಪೆರಿಯೋನಿಕ್ಸ್ ಎಕ್ಸಕವೇಟಸ್:**



➤ಈ ಜಾತಿಯ ಹುಳು ನೀಲಿ ಬಣ್ಣದ ದೇಹ ಹೊಂದಿದ್ದು ಇವುಗಳನ್ನು ಗಾಳದ ಹುಳು ಎಂದು ಕರೆಯಲಾಗುವುದು.

**ಎರೆಹುಳು ಜೀವನ ಚಕ್ರ / ಚರಿತ್ರೆ**



• ಎರೆಹುಳುಗಳು ಎಲುಬಿಲ್ಲದ ನಿಶಾಚರಿ ಪ್ರಾಣಿಗಳು, ಸಾಮಾನ್ಯವಾಗಿ ಬೆಳಕನ್ನು ದ್ವೇಷಿಸುತ್ತವೆ. ಇವು ತಮ್ಮ ದೇಹದ ಆಕುಂಚನ ಮತ್ತು ಪ್ರಸರಣೆಯಿಂದ ಚಲಿಸುತ್ತವೆ. ಎರೆಹುಳುವಿನ ದೇಹದಲ್ಲಿ ತಲೆಯ ಸಮೀಪವಿರುವ ಕ್ಲೈಟೆಲಮ್ ಎಂಬ ಬಳೆಯಾಕಾರಾದ ಭಾಗವು ಸ್ಪಷ್ಟವಾಗಿ ಗೋಚರಿಸಿದಾಗ ಅದು ಪ್ರೌಢಾವಸ್ಥೆಯನ್ನು ತಲುಪಿದೆ ಎಂದು ಖಚಿತವಾಗುವುದು.

• ಎರೆಹುಳುಗಳು ದ್ವಿಲಿಂಗ ಜೀವಿಯಾಗಿದ್ದರೂ ಕೂಡ ಸಂತಾನಾಭಿವೃದ್ಧಿ ಮಾಡಲು ಎರಡು ಎರೆಹುಳುಗಳ ಸಂಯೋಗ ಅವಶ್ಯಕ. ಕೆಲವೊಂದು ಪ್ರಭೇದದಲ್ಲಿ ಸಂಯೋಗವಿಲ್ಲದೆ (ಪಾರ್ಥನೋಜೆನೆಸಿಸ್) ಸಂತಾನ ಉತ್ಪತ್ತಿ ಆಗುವುದು ಕಂಡು ಬಂದಿದೆ. ಸಂಯೋಗಗೊಂಡ ಒಂದು ವಾರದಲ್ಲಿ ಪ್ರೌಢಹುಳುಗಳು ಕೋಶ(ಮೊಟ್ಟೆ)ಗಳನ್ನಿಡಲು ಪ್ರಾರಂಭಿಸುತ್ತವೆ.

• ಮೊಟ್ಟೆಗಳು ಸಾಮಾನ್ಯವಾಗಿ ಹಳದಿ ಬಣ್ಣದಿಂದ ಕೂಡಿದ್ದು, ಕೊತಂಬರಿ ಬೀಜಗಳಂತೆ ಕಾಣುತ್ತವೆ. ಪ್ರತಿಯೊಂದು ಎರಹುಳು ತನ್ನ 2–3 ವರ್ಷ ಜೀವಂತ ಅವಧಿಯಲ್ಲಿ ಸುಮಾರು 120 – 300 ಕೋಶಗಳನ್ನು ಇಡುತ್ತದೆ. ಪ್ರತಿ ಒಂದು ಕೋಶದಲ್ಲಿ 4 ರಿಂದ 5 ಭ್ರೂಣಗಳಿದ್ದು 2 ರಿಂದ 3 ವಾರಗಳ ನಂತರ ಸರಾಸರಿ 2–4 ಮರಿಹುಳುಗಳು ಕೋಶದಿಂದ ಹೊರಬರುತ್ತವೆ.

**ಉಪಯೋಗಿಸಬಹುದಾದ ತ್ಯಾಜ್ಯ ವಸ್ತುಗಳು**

| | |
|---|---|
| 1. ಕೃಷಿ, ತೋಟಗಾರಿಕೆ ತ್ಯಾಜ್ಯ ಪದಾರ್ಥಗಳು | 2. ತೋಟಗಾರಿಕೆ ತ್ಯಾಜ್ಯ ಪದಾರ್ಥಗಳು |
| 3. ಅರಣ್ಯ ಮತ್ತು ತೋಟದ ಎಲೆ ತ್ಯಾಜ್ಯ | 4. ಮಾರುಕಟ್ಟೆ ತರಕಾರಿಯ ತ್ಯಾಜ್ಯ |
| 5. ಸಗಣಿ ಮತ್ತು ಪ್ರಾಣಿ ಪಕ್ಷಿಗಳ ಹಿಕ್ಕೆ | 6. ಕಳೆಗಳು ಮತ್ತು ಬೆಳೆಗಳ ಉಳಿಕೆಗಳು |
| 7. ಸಗಣಿ ಮತ್ತು ಪ್ರಾಣಿ ಪಕ್ಷಿಗಳ ಹಿಕ್ಕೆ | 8. ಅಡಿಗೆ ಮನೆ ತ್ಯಾಜ್ಯ |
| 9. ಬಯೋಗ್ಯಾಸ್/ ಬಯೋಡೈಜಸ್ಟರ್ ಸ್ಲರಿ | 10. ಕೃಷಿ ಉದ್ದಿಮೆ ತ್ಯಾಜ್ಯ |
| 11. ಪುರಸಭೆಯ ಘನ ತ್ಯಾಜ್ಯ | 12. ಆಹಾರ ಕೈಗಾರಿಕೆಯ ತ್ಯಾಜ್ಯ ವಸ್ತುಗಳು |

**ಎರೆಹುಳು ಗೊಬ್ಬರ ತಯಾರಿಸುವ ಪದ್ಧತಿಗಳು**

ಹಲವಾರು ಪದ್ಧತಿಗಳಲ್ಲಿ ಎರೆಹುಳು ಗೊಬ್ಬರ ತಯಾರಿಸಲಿಕ್ಕೆ ಸಾಧ್ಯವಿರುವುದರಿಂದ, ಶ್ರೇಷ್ಠ ದರ್ಜೆಯ ಗೊಬ್ಬರವನ್ನು ಈ ಕೆಳಗೆ ತಿಳಿಸಿರುವ ಪದ್ಧತಿಗಳನ್ನು ಅಳವಡಿಸಿಕೊಂಡು ಎರೆಗೊಬ್ಬರವನ್ನು ತಯಾರಿಸಬಹುದಾಗಿದೆ.

**1. ಆಯಾತಾಕಾರದ ಗುಂಡಿ ಮಾದರಿಯ ಅಥವಾ ಕಲ್ಲಿನಿಂದ ನಿರ್ಮಿಸುವ ತೊಟ್ಟಿ:**

ತೊಟ್ಟಿಯ ಅಳತೆ: 10 – 12 ಅಡಿ ಉದ್ದ, 3 ಅಡಿ ಅಗಲ, 2 – 3 ಅಡಿ ಆಳ





**2. ಆಯಾತಾಕರದ ಮಣ್ಣಿನ/ಸಿಮೆಂಟಿನ/ಕೆಂಪುಕಲ್ಲಿನ ಇಟ್ಟಿಗಿ ತೊಟ್ಟಿ:**

ತೊಟ್ಟಿಯ ವಿನ್ಯಾಸ: ಅಳತೆ: 8 – 12 ಅಡಿ ಉದ್ದ, 3 ಅಡಿ ಅಗಲ, 2.5–3 ಅಡಿ ಆಳ





**3. ಎರೆ ಗೊಬ್ಬರ ಚೀಲದ ಪದ್ಧತಿ:** ಖಾಲಿ ಜಾಗಗಳಲ್ಲಿ 12 ಅಡಿ ಉದ್ದ, 4 ಅಡಿ ಅಗಲ, 2 ಅಡಿ ಆಳ ಅಳತೆಯ ಎರೆ ಗೊಬ್ಬರದ ಚೀಲವನ್ನು ಉಪಯೋಗಿಸಿಕೊಂಡು ಎರೆಗೊಬ್ಬರ ತಯಾರಿಸಬಹುದು.





**4. ರಾಶಿ ಪದ್ಧತಿ:** ರಾಶಿ ಪದ್ಧತಿಯು ಅತಿ ಸರಳ ಹಾಗೂ ಕಡಿಮೆ ಖರ್ಚಿನಲ್ಲಿ ಮಾಡಬಹುದಾದ ಪದ್ಧತಿಯಾಗಿರುತ್ತದೆ. ಈ ಪದ್ಧತಿಯಲ್ಲಿ ಸಸ್ಯಜನ್ಯ, ಒಣ ಹಾಗೂ ಹಸಿರು ಪದಾರ್ಥಗಳನ್ನು ಪದರ ಪದರವಾಗಿ ರಾಶಿಯಂತೆ ನೆಲದ ಮೇಲೆ ಹರಡಿ ಪ್ರತಿ ಪದರಕ್ಕೆ ಸಗಣಿಯ ಗಂಜಲವನ್ನು ಹಾಕುವ ಮೂಲಕ, ಸಾವಯವ ವಸ್ತುಗಳನ್ನು ಬೇಗನೆ ಕೊಳೆಸಿ, ಕೊಳೆತ ಸಾವಯವ ರಾಶಿಗಳಿಗೆ ಎರೆಹುಳುಗಳನ್ನು ಬಿಟ್ಟು ಎರೆಗೊಬ್ಬರವನ್ನು ತಯಾರಿಸಬಹುದು. ಈ ಪದ್ಧತಿಯಲ್ಲಿಯೂ ಕೂಡ ಘಟಕದ ಉದ್ದ 15 ರಿಂದ 30

